# ಬದುಕಿಗೆ ಎಡತಾಕಿದ ಬಳ್ಳಿಗಳೇ ದೂರ ದೂಡಿದಾಗ...

ಅತ್ತ ನೀನಾಳ ತಂದೆ–ತಾಯಿ ನಾನು ಪೂರ್ಣ ರೂಪದಲ್ಲಿ ತಮ್ಮ ಜೀವನವನ್ನು ಪ್ರವೇಶಿಸಬೇಕೆಂದು ಬಯಸುತ್ತಿದ್ದರು. ನಾನು ಅವರ ಮಗನಾಗಿ, ಅವರ ಉತ್ತರಾಧಿಕಾರಿಯಾಗಬೇಕು, ನನ್ನ ಶಾಲೆಯ ಅಧ್ಯಾಪಕನ ನೌಕರಿಯನ್ನು ತ್ಯಜಿಸಿ ಅವರ ಮಾನ್ಲೂನ್ ಶೋರೂಮಿನ ಮ್ಯಾನೇಜರ್ ಆಗಬೇಕು, ಕೌಂಟರ್‌ನಲ್ಲಿ ಕೂತು ಲೇಡಿಸ್ ಡ್ರೆಸ್ ಮಾರಬೇಕು, ಸೊಂಟದ ಅಳತೆ 24, ಬ್ರೆಸ್ಟ್ ಅಳತೆ 31, ಹಿಪ್ಸ್ ಅಳತೆ 33... ಹೀಗೆ ಶರೀರದ ಅಳತೆಯನ್ನು ತೆಗೆದುಕೊಳ್ಳುತ್ತಿರಬೇಕೆಂದು ಅವರು ಬಯಸುತ್ತಿದ್ದರು. ಇದಕ್ಕಾಗಿ ಅವರು ನನಗೆ ಅನೇಕ ವಿಧದ ಆಮಿಷಗಳನ್ನು ಒಡ್ಡಿದ್ದರು. ಹೆಚ್ಚು ಸಂಬಳ ಕೊಡುವುದರೊಂದಿಗೆ ಪಾರ್ಟ್ನರ್‌ಶಿಪ್ ಬಗ್ಗೆ ಸಹ ಪ್ರಸ್ತಾಪಿಸಿದರು. ಆದರೆ ನನಗೆ ಹಿಂದೂಸ್ತಾನದ ಮಹಿಳೆಯರ ಉಡುಪುಗಳ ವ್ಯಾಪಾರದ ಬಗ್ಗೆ ಹಾಗೂ ಇಂಥ ಉದ್ಯೋಗದ ಬಗ್ಗೆ ಜ್ಞಾನವಿರಲಿಲ್ಲ; ಆ ಜ್ಞಾನವನ್ನು ಪಡೆಯಲು ಸಹ ಬಯಸುತ್ತಿರಲಿಲ್ಲ. ನಾನು ನನ್ನ ನೌಕರಿಯನ್ನು ಬಿಟ್ಟು, ಅವರ ಬಿಜಿನೆಸ್ ನೋಡಿಕೊಳ್ಳುವ ಪ್ರಸ್ತಾವವನ್ನು ಸ್ಪಷ್ಟವಾಗಿ ನಿರಾಕರಿಸಿದೆ. ಆ ಬಿಜಿನೆಸ್ ನೋಡ ನೋಡುತ್ತಿರುವಂತೆಯೇ ಮಾರಾಟವಾಯಿತು. ನಾನು ತಟಸ್ಥನಾಗಿದ್ದೆ.

ನೀನಾಳಿಗೆ ನಾನು ಅವಳ ಯಾವ ಕೆಲಸಕ್ಕೂ ಉಪಯೋಗಕ್ಕೆ ಬಾರದ ವ್ಯಕ್ತಿಯೆಂದು ಅನ್ನಿಸಿತು. ಅಲ್ಲದೆ ನೀನಾ ಕಷ್ಟಪಟ್ಟು ದುಡಿಯುವ, ಹೋರಾಟ ಮಾಡುವ, ಲಾಭ–ನಷ್ಟವನ್ನು ನೋಡುವ 'ಮ್ಯಾನಿಪುಲೇಟೀವ್' ಮಹಿಳೆಯಾಗಿದ್ದಳು. ಅವಳು ಸಂಬಂಧದಲ್ಲೂ ಲಾಭ ನಷ್ಟವನ್ನು ನೋಡುತ್ತಿದ್ದಳು. ಪಾಲ್ ತನ್ನ ಯಾವ ಕೆಲಸಕ್ಕೂ ಉಪಯೋಗಕ್ಕೆ ಬರುವವನಲ್ಲ ಎಂದು ಅನ್ನಿಸಿದಾಗ, ಅವಳು ನನ್ನನ್ನು ತನ್ನ ಜೀವನದಿಂದ ಹೊರಹಾಕಿದಳು. ನಾನು ಅವಳ ಮನೆಯಿಂದ ಹೊರ ಬರಬೇಕಾಯಿತು.

ನೀನಾ ನನಗೆ ನಾಲ್ಕು ದಿನಗಳ ಕಾಲಾವಕಾಶವನ್ನು ಕೊಟ್ಟಳು. ನನ್ನ ಹುಟ್ಟುಹಬ್ಬದ ಮರುದಿನ ಬೆಳಿಗ್ಗೆ ಲೂಸಿ ಮತ್ತು ಗ್ರೇಸಿ ಎಡಿನ್‌ಬರೊಗೆ ಹೋಗಲು ವಿಮಾನ ಹಿಡಿಯಬೇಕಿತ್ತು. ನಾನು ಅವರಿಗೆ ಡೈನಿಂಗ್ ಟೇಬಲ್‌ನಲ್ಲಿ ಕೂರಿಸಿ ತಿಂಡಿ ತಿನಿಸುತ್ತಿದ್ದೆ. ತಿಂಡಿಯಲ್ಲಿ ಎರಡು ಟೋಸ್ಟನ್ನು ರೋಸ್ಟ್ ಮಾಡಿ ಕೊಟ್ಟಿದ್ದೆ; ಪುತ್ರಿಯರು ಮನೆಯಿಂದ ಹಸಿದು ಹೋಗಬಾರದು ಎಂದು ಹೀಗೆ ಮಾಡಿದ್ದೆ. ಹಾಗಂತ ರಾತ್ರಿ ಪಾರ್ಟಿಯ ಸಾಕಷ್ಟು ಆಹಾರ– ಚಿಕನ್, ಸಮೋಸಾ, ನಾನ್, ಕೇಕ್‌ಗಳು ಉಳಿದಿದ್ದವು. ಇವುಗಳಲ್ಲಿ ಏನು ತಿನ್ನಲು ಬಯಸುತ್ತೀರಿ ಎಂದು ಅವರನ್ನು ಕೇಳಿದಾಗ, ಅವರು ಆ ಯಾವುದನ್ನೂ ತಿನ್ನಲು ಬಯಸಲಿಲ್ಲ, ನನ್ನ ಒಣ ಟೋಸ್ಟ್‌ಗಳನ್ನೇ ತಿನ್ನಲು ಸಿದ್ಧರಾದರು.

ನೀನಾ ಮೇಲಿನಿಂದ ಸಿದ್ಧಳಾಗಿ ಕೆಳಗಿಳಿದಳು. ಅವಳು ಬಿಜಿನೆಸ್ ಸೂಟ್ ಧರಿಸಿದ್ದಳು, ಕೈಯಲ್ಲಿ ಬಿಜಿನೆಸ್ ಸೂಟ್‌ಕೇಸ್ ಹಿಡಿದಿದ್ದಳು.

'ಗುಡ್ ಮಾರ್ನಿಂಗ್'. ಲೂಸಿ ಮತ್ತು ಗ್ರೇಸಿಗೆ ನೀನಾ ಕೇಳಿದಳು, 'ಇವತ್ತು ಎಡಿನ್‌ಬರೊಗೆ ಮರಳಿ ಹೋಗುತ್ತಿದ್ದೀರಿ'.

ಇದು ಪ್ರಶ್ನೆಯಾಗಿರದೆ ಹೇಳಿಕೆಯಾಗಿತ್ತು. ಏಕೆಂದರೆ ಅವಳಿಗೆ ಲೂಸಿ ಮತ್ತು ಗ್ರೇಸಿಯ ಕಾರ್ಯಕ್ರಮ ತಿಳಿದಿತ್ತು; ಅಂದರೆ ಮರುದಿನವೇ ಇಬ್ಬರೂ ಎಡಿನ್‌ಬರೊಗೆ ಮರಳಿ ಹೋಗುತ್ತಾರೆ, ಅವರು ತಮ್ಮ ಶಾಲೆಯನ್ನು ಹೆಚ್ಚು ದಿನ ಮಿಸ್ ಮಾಡಿಕೊಳ್ಳುವುದಿಲ್ಲ ಎಂಬ ವಿಷಯ ನೀನಾಳಿಗೆ ತಿಳಿದಿತ್ತು.

ನೀನಾಳನ್ನು ನೋಡಿದ ಕೂಡಲೇ ಇಬ್ಬರೂ ಟೋಸ್ಟ್ ತಿನ್ನುವುದನ್ನು ಬಿಟ್ಟು, ಹೆದರುತ್ತಾ ನಿಂತರು.

'ಹೌದು' ಎಂದು ಇಬ್ಬರೂ ತಲೆಯಾಡಿಸಿದರು.

ನೀನಾ ಇಬ್ಬರನ್ನು ತಬ್ಬಿಕೊಂಡು, ಅವರಿಗೆ 'ಹ್ಯಾಪಿ ಜರ್ನಿ' ಎಂದು ಹಾರೈಸಿದಳು. ನಂತರ ನನ್ನನ್ನು ನೋಡುತ್ತಾ ಕರ್ಕಶ ಧ್ವನಿಯಲ್ಲಿ ಹೇಳಿದಳು, 'ನಾನು ನಾಲ್ಕು ದಿನ ಹಾಲೆಂಡಿಗೆ ಹೋಗುತ್ತಿದ್ದೇನೆ. ಅಷ್ಟರೊಳಗೆ ನೀವು ನಿಮ್ಮ ನೆಲೆಯನ್ನು ಹುಡುಕಿಕೊಳ್ಳಿ'.

ನಾನು ಮೌನವಾಗಿ ತಲೆಯಾಡಿಸಿದೆ.

ಲೂಸಿ ಮತ್ತು ಗ್ರೇಸಿಯನ್ನು ಏರ್‌ಪೋರ್ಟಿಗೆ ಬಿಟ್ಟು, ನನ್ನ ನೆಲೆಯನ್ನು ಹುಡುಕಿಕೊಳ್ಳುವಲ್ಲಿ ಮಗ್ನನಾದೆ. ಅದೃಷ್ಟದಿಂದ ಯಾಸಬೋರ್ಗ್‌ನ ಮೆನ್ ಹಾಸ್ಟೆಲ್‌ನಲ್ಲಿ ಕೋಣೆಯೊಂದು ತಕ್ಷಣ ಲಭಿಸಿತು. ಎರಡು ದಿನಗಳ ನಂತರ ನೀನಾ ಹಾಲೆಂಡಿನಿಂದ ಮರಳಿ ಬರುವುದಕ್ಕೆ ಮೊದಲೇ ನನ್ನೆಲ್ಲಾ ಗಂಟು ಮೂಟೆ ಕಟ್ಟಿಕೊಂಡು ಅವಳ ಮನೆಯಿಂದ ಹೊರಟು ಹೋಗಿದ್ದೆ.

ಈಗ ಹತ್ತು ಬೈ ಹನ್ನೆರಡು ಅಡಿಯ ಕೊಠಡಿ ನನ್ನ ವಾಸಸ್ಥಳವಾಗಿತ್ತು. ನಾನು ಹಾಸ್ಟೆಲ್‌ನ ಈ ವಿಂಗ್‌ನಲ್ಲಿರುವ ಇನ್ನಿತರ ಹನ್ನೆರಡು ಜನರೊಂದಿಗೆ ಕಿಚನ್ ಮತ್ತು ಟಾಯ್ಲೆಟನ್ನು

